## ನೋಡ ಬನ್ನಿ ಹಸಿರು ಜೇಡವ

ಗೆಳತಿ ಸ್ವಾತಿಯ ವಾಟ್ಸ್‌ಆ್ಯಪ್‌ನಲ್ಲಿ ಕಂಡ ಒಂದು ಫೋಟೊ ಗಮನ ಸೆಳೆಯಿತು. ಅದು ಒಂದು ಜೇಡ. ಸಾಮಾನ್ಯವಾದುದಲ್ಲ. ಬಣ್ಣ ಯಾವಾಗಲೂ ಕಾಣುವಂತ ಜೇಡದಂತಿರಲಿಲ್ಲ. ಬಣ್ಣ ಹಸುರಿನದಾಗಿತ್ತು. ಸ್ವಲ್ಪ ವಿಚಿತ್ರವಾಗಿ ಕಂಡಿತು. ಹಾಗಾಗಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ಈ ಜೇಡ ಪಶ್ಚಿಮ ಘಟ್ಟಗಳಲ್ಲಿ ವಿಶೇಷವಾಗಿ ಕಾಣಸಿಗುವಂತಹುದು. 40 ಸಾವಿರಕ್ಕೂ ಹೆಚ್ಚು ಜಾತಿಯ ಜೇಡಗಳು ಜಗತ್ತಿನಲ್ಲಿ ಇವೆಯಂತೆ. ಅವುಗಳಲ್ಲಿ ಈ ಹಸಿರು ಜೇಡ ವಿಷರಹಿತವಾದ ನಿರುಪದ್ರವಿ ಜೀವಿಯಾಗಿದೆ.

—ಅಶ್ವಿನಿ ಮೂರ್ತಿ ಅಯ್ಯನಕಟ್ಟೆ





## ಕಟ್ಟಿಗೆ ಮೂರ್ತಿಗಳು

ಮೂರ್ತಿಪೂಜೆ ಎಂಬುದು ಹಿಂದೂ ಸಂಪ್ರದಾಯದಲ್ಲಿ ಅನುಸರಿಸುತ್ತ ಬಂದಿದ್ದಾರೆ. ಸಾಮಾನ್ಯವಾಗಿ ದೇವಸ್ಥಾನಗಳಲ್ಲಿ ಕಲ್ಲಿನಿಂದ ಅಥವಾ ಮಣ್ಣಿನಿಂದ ಮಾಡಿದ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವುದನ್ನು ನೋಡಿರುತ್ತೇವೆ. ಆದರೆ ಇಲ್ಲೊಂದು ಕಡೆ ಕಟ್ಟಿಗೆಯಿಂದ ಮಾಡಿದ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜೆಗೈಯ್ಯುತ್ತಿರುವುದು ವಿಶೇಷ.

ಕೊಪ್ಪಳ ತಾಲ್ಲೂಕಿನ ಹ್ಯಾಟಿಮುಂಡರಗಿ ಗ್ರಾಮದ ಹೊರವಲಯದಲ್ಲಿರುವ ಗಾಳೆಮ್ಮದೇವಿ ದೇವಾಲಯದ ಆವರಣದಲ್ಲಿ ಇಂತಹ ವಿಶಿಷ್ಟವಾದ ಕಟ್ಟಿಗೆಯ ಮೂರ್ತಿಗಳು ನೋಡುಗರ ಗಮನ ಸೆಳೆಯುತ್ತವೆ. ಈ ಮೂರ್ತಿಗಳಿಗೂ ವಿಶೇಷ ದಿನಗಳಂದು ಪೂಜೆ ಪುನಸ್ಕಾರಗಳು ನಡೆಯುತ್ತವೆ. ಸುತ್ತಮುತ್ತಲ ಗ್ರಾಮಗಳ ಭಕ್ತರೂ ಕೂಡ ಈ ಮೂರ್ತಿಗಳಿಗೆ ಭಕ್ತಿಯಿಂದ ಪೂಜೆ ಮಾಡುತ್ತಾರೆ. ಅಂದ ಹಾಗೆ ಈ ಮೂರ್ತಿಗಳು ಯಾವ ಕಾಲದಲ್ಲಿ, ಯಾರು ಪ್ರತಿಷ್ಠಾಪಿಸಿದರು ಎಂಬುದರ ಬಗ್ಗೆ ಸ್ಪಷ್ಟವಾದ ಮಾಹಿತಿ ದೊರೆತಿಲ್ಲ.

—ಸೋಮಲಿಂಗಪ್ಪ ಬೆಣ್ಣೆ ಗುಳದಳ್ಳಿ

## ಕುದುರೆ ವ್ಯಾಪಾರ

ಈ ಕ್ಷಣದ ಸುಂದರ ಸನ್ನಿವೇಶ ತಕ್ಷಣವೇ ಮೊಬೈಲ್ ಫೋಟೊದಲ್ಲಿ ಸೆರೆಯಾಗುತ್ತದೆ. ಹಳೆಯ ಕಾಲದಲ್ಲಿ ಹೇಗಿತ್ತು? ಆಗಿನ ಕಾಲದ ಜನಜೀವನದ ಸನ್ನಿವೇಶಗಳನ್ನು ಶಿಲ್ಪ ಕಲೆಯಲ್ಲಿ ದಾಖಲಿಸಿದ್ದು ಕಂಡು ಬರುತ್ತದೆ. ಮೇಲಿನ ಚಿತ್ರದಲ್ಲಿ ನೋಡಿ. ಇದು ಹಂಪಿಯ ವಿಜಯವಿಠ್ಠಲ ಮಂದಿರದ ಗೋಡೆಯಲ್ಲಿ ಕೆತ್ತಿರುವ ಶಿಲ್ಪ. ವಿಜಯನಗರದ ಅರಸರಿಗೆ ಕುದುರೆಗಳು ಸೈನ್ಯದ ಅಗತ್ಯ ಭಾಗವಾಗಿದ್ದವು. ಕುದುರೆ ವ್ಯಾಪಾರ ಹೇಗೆ ನಡೆಯುತ್ತಿತ್ತು? ಕುದುರೆಯ ಗುಣಲಕ್ಷಣಗಳನ್ನು ಹೇಗೆ ಪರೀಕ್ಷಿಸಲಾಗುತ್ತಿತ್ತು ಎಂದು ತುಂಬ ಸೂಕ್ಷ್ಮವಾಗಿ ಅವಲೋಕಿಸಿ ಪ್ರತಿಯೊಂದು ಚಿಕ್ಕ ಪುಟ್ಟ ಸಂಗತಿಗಳನ್ನೂ ಬಿಡದೆ ವಿವರವಾಗಿ ಶಿಲ್ಪಿ ಕೆತ್ತಿದ್ದಾನೆ.

—ವಸುಂಧರಾ ವಿ.ಕುಲಕರ್ಣಿ, ಧಾರವಾಡ

